<u>ಎರಡನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ</u>
<u>ಸಾಃ ಗೋಕಾಕ</u>
<u>ಸಿಸಿ ನಂಬರಃ **1672/2011**</u>

ನಾನು, ರೂಪಾ ಮಟ್ಟಿ
ಬಿ.ಎಸ್.ಸಿ ಎಲ್‌ಎಲ್ ಎಮ್.,
ಎರಡನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮಎಫ್‌ಸಿ, ಗೋಕಾಕ.

<u>ದೋಷಾರೋಪಣೆ</u>

ಆರೋಪಿತನ ಹೆಸರು 1) ಅಡಿವೆಪ್ಪ ನಿಂಗಪ್ಪ ನಾಯಿಕ
ವಯಸ್ಸುಃ 24 ವರ್ಷ, ಉದ್ಯೋಗಃ ಕೂಲಿ
ಸಾಃ ಬೂಡ್ರ್ಯಾನೂರ, ತಾ & ಜಿಃ ಬೆಳಗಾವಿ.

ನಿಮ್ಮ ಮೇಲೆ ಹೊರಸುವ ದೋಷಾರೋಪಣೆ ಏನೆಂದರೆ,

ದಿಃ 20-08-2011 ರಂದು ಬೆಳಿಗ್ಗೆ 4-00 ಗಂಟೆಗೆ ಸುಮಾರಿಗೆ ಗೋಕಾಕ ಅಬಕಾರಿ ಪೋಲಿಸ ಠಾಣಾ ವ್ಯಾಪ್ತಿಯಲ್ಲಿರುವ ಪಂಜಾನಟ್ಟಿ ಗ್ರಾಮದಿಂದ ಘೋಡಕುದರಗಿ ಗ್ರಾಮಕ್ಕೆ ಹೋಗುವ ರಸ್ತೆಯ ಮಧ್ಯದಲ್ಲಿರುವ ಕೆನಲಾ ಹತ್ತಿರ ಆರೋಪಿತನಾದ ನೀನು ನಿನ್ನ ಸ್ವಂತ ಲಾಭಕ್ಕಾಗಿ ಸರಕಾರದ ಯಾವುದೇ ಅನುಮತಿ, ಪರವಾನಗಿ ಇಲ್ಲದೇ ಅಕ್ರಮವಾಗಿ ಸುಮಾರು 2 ರಬ್ಬರ ಟ್ಯೂಬಗಳಲ್ಲಿ ಕಳ್ಳಭಟ್ಟಿ ಸರಾಯಿ 40 ಲೀ. ದ್ವಿ ಚಕ್ರವಾಹನದ ಮೇಲಿಟ್ಟುಕೊಂಡು ಸಾಗಾಟ ಮಾಡುತ್ತಿದ್ದಾಗ ಕಲಂ 32(1) ಕರ್ನಾಟಕ ಅಬಕಾರಿ ಕಾಯ್ದೆ ರಡಿಯಲ್ಲಿ ಅಪರಾಧವನ್ನು ಮಾಡಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ಸ್ಥಳ ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ಮೇಲೆ ಹೇಳಿದ ಮಧ್ಯವನ್ನು ದ್ವಿ ಚಕ್ರವಾಹನದ ಮೇಲಿಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡಲು ಸರ್ಕಾರದ ಯಾವುದೇ ಅನುಮತಿ, ಪರವಾನಗಿ ಇಲ್ಲದೇ ನಿನ್ನ ವಶದಲ್ಲಿಟ್ಟುಕೊಂಡು ಕಲಂ 38 (ಎ) ಕರ್ನಾಟಕ ಅಬಕಾರಿ ಕಾಯ್ದೆ 1965 ರಡಿಯಲ್ಲಿ ಅಪರಾಧವನ್ನು ಮಾಡಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ಮೇಲೆ ಹೇಳಿದ ಮಧ್ಯವನ್ನು ಸೇವಿಸಿದರೆ ಅದು ಮನುಷ್ಯನ ಪ್ರಾಣಕ್ಕೆ ಹಾನಿಕಾರಕ ಅಂತಾ

ಗೊತ್ತಿದ್ದರೂ ಸಹ ಮೇಲೆ ಹೇಳಿದ ಕಳ್ಳಭಟ್ಟಿ ಸರಾಯಿಯನ್ನು ನಿನ್ನ ವಶದಲ್ಲಿ ಇಟ್ಟುಕೊಂಡು ಕಲಂ 273 ಭಾ.ದಂ.ಸಂ.ಅಡಿ ಅಪರಾಧ ಮಾಡಿರುವಿ.

ಸದರಿ ಅಪರಾಧಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.

ಪ್ರಃ 1 ನಿನಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉಃ

ಪ್ರಃ 2 ನೀನು ಗುನ್ನಾ ಕಬೂಲಿ ಆಗುವಿರೋ ಅಥವಾ ವಿಚಾರಣೆ ಆಗಬೇಕೋ?

ಉಃ

(ಮೇಲಿನ ಆಪಾದನೆಯನ್ನು ಆರೋಪಿತರಿಗೆ ಓದಿ ಹೇಳಿ ಅವರಿಂದ ಬಂದ ಉತ್ತರಗಳನ್ನು ನನ್ನ ಸ್ವಅಕ್ಷರಗಳಲ್ಲಿ ಬರಕೊಂಡೆ ಅಂತಾ ದೃಢೀಕರಿಸುತ್ತೇನೆ)

ಸಹಿ/-

ದಿಃ 09-01-2023

2 ನೇ ಹೆ.ದಿ.ನ್ಯಾ.ದಂ.,ಗೋಕಾಕ.